ಕೋಟ್ಯಧಿಪತಿ ತಂದೆ ತನ್ನ ಮಗನ ಸೋಮಾರಿತನ, ಬೇಜವಾಬ್ದಾರಿತನ ಕಂಡು ರೋಸಿ ಹೋಗಿದ್ದ. ಅವನು ಒಂದು ದಿನ ತನ್ನ ಸಿಟ್ಟನ್ನು ತಡೆದುಕೊಳ್ಳಲಾಗದೆ ಮಗನನ್ನು ಎದುರಿಗೆ ಕರೆಯಿಸಿ ಹಳಿಯಲಾರಂಭಿಸಿದ, 'ಮೂರ್ಖ! ಅಯೋಗ್ಯ! ನಾನು ನಿನ್ನ ವಯಸ್ಸಿನಲ್ಲಿದ್ದಾಗ ದಿನಾ ಕೂಲಿ ಕೆಲ್ಸ ಮಾಡ್ತಿದ್ದೆ, ಮಣ್ಣು ಹೊರುತ್ತಿದ್ದೆ, ನೀರು ಸೇದುತ್ತಿದ್ದೆ, ಹೋಟಲ್‌ನಲ್ಲಿ ಪಾತ್ರೆ ತೊಳೀತಿದ್ದೆ. ಅದೇ ನೀನು...'

ಮಗ ತಿರಸ್ಕಾರದಿಂದ ಹೇಳಿದ, 'ಅಪ್ಪಾ, ಅದ್ಕೇ ನನಗೆ ನಿನ್ನ ಬಗ್ಗೆ ತುಂಬಾ ಅಭಿಮಾನವಿದೆ. ಒಂದು ವೇಳೆ ನೀನು ಅಷ್ಟೆಲ್ಲಾ ಕಷ್ಟಪಡದಿದ್ರೆ ನಾನಿವತ್ತು ನಿನ್ನ ಹಾಗೆಯೇ ಮಣ್ಣು ಹೊರಬೇಕಿತ್ತು, ಹೊಟೇಲ್‌ನಲ್ಲಿ ಪಾತ್ರೆ ತೊಳಿಯಬೇಕಿತ್ತು...'!

***




ರೀ...! ನಿಮ್ಮ ಅನುಮತಿ ಕೊಟ್ರೆ, ಹತ್ತು ನಿಮಿಷ ಅಮ್ಮನ ಜೊತೆ ಮಾತನಾಡುವೆ...!

ಜಿಪುಣನೊಬ್ಬನ ಅಂತಿಮ ಕಾಲ ಸಮೀಪಿಸಿತ್ತು, ಅವನು ಹಾಸಿಗೆಯಲ್ಲಿ ಮಲಗಿ ಕೊನೆಯ ಉಸಿರೆಳೆಯುತ್ತಿದ್ದ. ಅವನ ಅಕ್ಕಪಕ್ಕ ಅವನ ಐದು ಜನ ಮಕ್ಕಳು ನಿಂತಿದ್ದರು. ಎಲ್ಲರೂ ತಂದೆಯ ಅಂತಿಮ ಇಚ್ಛೆಯಂತೆ ಕಡಿಮೆ ಖರ್ಚಿನಲ್ಲಿ ಶವಯಾತ್ರೆಯನ್ನು ಹೇಗೆ ಮುಗಿಸಬೇಕೆಂದು ಚರ್ಚಿಸುತ್ತಿದ್ದರು.

'ಅಂಬುಲೆನ್ಸ್‌ನಲ್ಲಿ ಶವ ಒಯ್ಯೋಣ' ಒಬ್ಬ ಮಗ ಹೇಳಿದ.

'ಬೇಡ, ಕೈಗಾಡಿಯಲ್ಲಿ ಶವ ಒಯ್ಯೋಣ.' ಎರಡನೆಯ ಮಗ ಹೇಳಿದ.

'ಬೇಡ, ಸೈಕಲ್ ಹಿಂದಕ್ಕೆ ಕಟ್ಟಿಕೊಂಡು ಶವ ಒಯ್ಯೋಣ.' ಮೂರನೆಯ ಮಗ ಹೇಳಿದ.

'ಬೇಡ, ಇಬ್ಬರು ಎತ್ತಿಕೊಂಡು ಶವ ಒಯ್ಯೋಣ.' ನಾಲ್ಕನೆಯ ಮಗ ಹೇಳಿದ.

'ಬೇಡ, ಹೆಗಲಿಗೆ ಹಾಕ್ಕೊಂಡು ಶವ ಒಯ್ಯೋಣ.' ಐದನೆಯ ಮಗ ಹೇಳಿದ.

ಜಿಪುಣ ಮಕ್ಕಳ ಮಾತುಗಳನ್ನೆಲ್ಲಾ ಕೇಳಿಸಿಕೊಳ್ಳುತ್ತಿದ್ದ. ಕಡೆಗೆ ಅವನಿಂದ ತಡೆದುಕೊಳ್ಳಲಾಗಲಿಲ್ಲ. ಅವನು ಮೆಲ್ಲನೆ ಎದ್ದು ಕೂತು ಹೇಳಿದ, 'ನೀವೇನೂ ಮಾಡ್ಬೇಡಿ, ನನ್ನ ಅಂಗಿ, ಪಂಚೆ, ಚಪ್ಪಲಿ ಮತ್ತು ಊರುಗೋಲನ್ನು ತಂದ್ಕೊಡಿ, ನಾನೇ ನಡೆದು ಸ್ಮಶಾನಕ್ಕೆ ಹೋಗ್ತೀನಿ!'

***

ಆಂಗ್ಲ ಲೇಖಕರಾದ ಎಚ್.ಇ. ವೇಲ್ಸ್ ಅವರಿಗೆ ಪ್ರಸಿದ್ಧ ಸಿನಿಮಾ ನಟಿಯೊಬ್ಬಳು ಪತ್ರ ಬರೆದಳು, 'ನಿಮ್ಮ ಪುಸ್ತಕ ನನಗೆ ತುಂಬಾ ಮೆಚ್ಚುಗೆಯಾಯಿತು. ಅಷ್ಟು ಒಳ್ಳೆಯ ಪುಸ್ತಕವನ್ನು ನೀವು ಯಾರಿಂದ ಬರೆಸಿದ್ರಿ?'

ವೇಲ್ಸ್ ನಟಿಗೆ ಮರು ಪತ್ರ ಹೀಗೆಂದು ಬರೆದರು, 'ನಿಮ್ಮ ಪತ್ರ ತಲುಪಿದೆ, ಧನ್ಯವಾದಗಳು. ನಿಮಗೆ ನನ್ನ ಪುಸ್ತಕ ಇಷ್ಟವಾದದ್ದನ್ನು ತಿಳಿದು ತುಂಬಾ ಸಂತೋಷವಾಯಿತು. ಆದರೆ ನೀವು ಪುಸ್ತಕವನ್ನು ಯಾರಿಂದ ಓದಿಸಿದಿರಿ, ದಯವಿಟ್ಟು ತಿಳಿಸಿ.'

***

'ಹೆಂಡ ಕುಡಿದು ಕಾರು ಚಾಲನೆ ಮಾಡಬಾರದೆಂದು ನಿಮ್ಗೆ ಗೊತ್ತಿಲ್ವ?' ಟ್ರಾಫಿಕ್ ಇನ್‌ಸ್ಪೆಕ್ಟರ್ ಅಪರಾಧಿಯನ್ನು ಕೇಳಿದರು.

'ಗೊತ್ತಿತ್ತು ಸಾರ್?'

'ಹಾಗಾದ್ರೆ ಕಾರ್ ಡ್ರೈವ್ ಏಕೆ ಮಾಡ್ದೆ?'

'ಕುಡಿದಾದ ನಂತ್ರ ನಾನು ಕಾರು ಡ್ರೈವ್ ಮಾಡ್ತಿದೀನಿ ಅನ್ನೋದು ಗೊತ್ತಾಗ್ಲಿಲ್ಲ ಸರ್!'

***

'ಗೆಳೆಯ, ಏಕೆ ಇವತ್ತು ತುಂಬಾ ಬೇಸರದಲ್ಲಿದ್ದೀಯ?'

'ಒಂದು ಪುಸ್ತಕ ನೋಡ್ತಿದ್ದೆ, ಅದರ ಕೊನೆಯ ಪುಟ ತುಂಬಾ ಕರುಣಾಜನಕವಾಗಿತ್ತು.'

'ಅದ್ಯಾವ ಪುಸ್ತಕ?

'ನನ್ನ ಬ್ಯಾಂಕಿನ ಪಾಸ್ ಪುಸ್ತಕ!' ಗೆಳೆಯ ನಿಟ್ಟುಸಿರು ಬಿಟ್ಟ.

***

ವೈದ್ಯರೊಬ್ಬರು ಶ್ರೀಮಂತ ರೋಗಿಗೆ ಸಲಹೆ ಕೊಡುತ್ತಾ ಹೇಳಿದರು, 'ನೀವು ನಿಮ್ಮ ಆರೋಗ್ಯವನ್ನು ಸುಧಾರಿಸಿಕೊಳ್ಳಲು ನಿತ್ಯ ಕಡೇಪಕ್ಷ ಮೂರು ಕಿಲೋ ಮೀಟರ್ ಹೋಗಬೇಕಾಗುತ್ತೆ.'

'ನಾನು ಹೋಗಬಲ್ಲೆ, ಡಾಕ್ಟರ್. ಆದ್ರೆ ಕಾರಿಗೆ ಪೆಟ್ರೋಲ್ ಸಿಗಬೇಕಲ್ಲ!'

***

ಒಬ್ಬ ಕಳ್ಳ ತನ್ನ ಮಿತ್ರನಿಗೆ ಕಿವಿಮಾತು ಹೇಳಿದ, 'ಇನ್ಮೇಲೆ ನಾವು ರಾತ್ರಿ ವೇಳೆಯಲ್ಲಿ ಕದಿಯೋದನ್ನು ಬಿಡಬೇಕಾಗುತ್ತೆ.'

'ಯಾಕ್ಲಾ?' ಕಳ್ಳ ಮಿತ್ರನಿಗೆ ಆಶ್ಚರ್ಯವಾಯಿತು.

'ಸರ್ಕಾರದ ಹದ್ದು ಕಣ್ಣು ಕಾಳಸಂತೆಯ ಮೇಲೆ ಬಿದ್ದಿದೆ ಕಣ್ಲಾ!'

ಹಿಂದಿಯಿಂದ ಸಂಗ್ರಹ: ಡಿ.ಎನ್. ಶ್ರೀನಾಥ್

